✆ Off : 26613091 / 26607167
42103360 / 26761877
Email : kea@kea.co.in
Web : www.kea.co.in

# KARNATAKA EMPLOYERS' ASSOCIATION

NO.74, 2nd FLOOR, SHANKARA ARCADE, VANIVILAS ROAD, BASAVANAGUDI
BENGALURU - 560 004
Reg. No. TU 507 / 20-3-1962

Date : 12-10-2018

CIRCULAR No.80/2018

To
All Members of the Association

## GOVT. OF KARNATAKA ADDS 22 EMPLOYMENTS TO THE LIST OF SCHEDULED EMPLOYMENTS UNDER MINIMUM WAGES ACT

1. The Minimum Wages Act provides for fixing minimum rates of wages in certain employments. Section 2 (g) of the Minimum Wages Act defines scheduled employment means "an employment specified in the scheduled or any process or branch of work forming the part of such employment." The scheduled attached to the Minimum Wages Act contains two parts which list the employment for which Minimum Wages may be fixed by the appropriate Govt.

2. Section 27 of the Minimum Wages Act empowers the State Govt. also to add to the schedule of employment. The section provides as under:

   "The appropriate Govt. after giving by notification in the official gazette not less than three months' notice of its intention so to do, may, by like notification, add to either part of the schedule any employment in respect of which it is of opinion that minimum wages rates of wages should be fixed under this Act, and thereupon the schedule shall in its application to the State be deemed to be amended accordingly."

3. The Govt. of Karnataka in exercise of powers vested in it under Section 27 read with section 2(g) Minimum Wages Act has added the following employments to the existing list of scheduled employments under the Minimum Wages Act.

   - E-commerce and courier.
   - Gym, spa, beauty parlour, massage, fitness centres, yoga centres and similar health and beauty treatment centres.
   - Religious and social institutions like temple, mutt, church, masjid, gurudwara, basti, ISKON, Arya Samaj, Theosophical Society etc. for persons working in the officers of the above institutions.

- Public amusement park, water theme park and similar commercial leisure and entertainment business- and works related to the same.
- Mobile tower installation, TV cable and similar related institutions.
- Island water transport like canoes, commercial launch, tourist launch, fishing, theppa etc.,
- Old age homes, orphanages, shelters for abandoned children and girls, play home and other such institutions.
- Govt. undertaking, private institutions, registered society, trust, foundations and related institutions - working in their offices.
- Manufacture of aluminium and tin.
- Bamboo and cane employment.
- Coconut and coconut fibre employment.
- Computer and cyber café and related work.
- Manufacture of toys.
- Khadi and village establishments.
- LPG - distribution and sale.
- Loading, unloading and transport of sand from river, lakes etc.,
- Borewell and its related works.
- Scrap, yard - sale, segregation and related work.
- Cooking salt - manufacture and officer related work.
- Employment in hiring of pandal, chairs, flower decoration, furniture etc., and related work.
- Manufacture of M-sand.

4. With the inclusion of above employments to the list scheduled employment under the Minimum Wages Act, the Govt. of Karnataka is empowered to fix the minimum wages for employment in the above establishment.

5. Karnataka Gazette dated 4.10.2018 is enclosed for the information of the members.

**for KARNATAKA EMPLOYERS' ASSOCIATION**

**sd/-**
**(B.C. PRABHAKAR)**
**PRESIDENT**

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ ೧೫೩<br>Volume 153 | ಬೆಂಗಳೂರು, ಗುರುವಾರ, ಅಕ್ಟೋಬರ್ ೪, ೨೦೧೮ (ಆಶ್ವಯುಜ ೧೨, ಶಕ ವರ್ಷ ೧೯೪೦)<br>Bengaluru, Thursday, October 4, 2018 (Aashwayuja 12, Shaka Varsha 1940) | ಸಂಚಿಕೆ ೪೦<br>Issue 40 |
|---|---|---|


## ಭಾಗ ೪ಎ

## ರಾಜ್ಯದ ವಿಧೇಯಕಗಳ ಮತ್ತು ಅವುಗಳ ಮೇಲೆ ಪರಿಶೀಲನಾ ಸಮಿತಿಯ ವರದಿಗಳು, ರಾಜ್ಯದ ಅಧಿನಿಯಮಗಳು ಮತ್ತು ಆಧ್ಯಾದೇಶಗಳು, ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರವು ಹೊರಡಿಸಿದ ಸಾಮಾನ್ಯ ಶಾಸನಬದ್ಧ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ನಿಯಮಗಳು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯವು ಮಾಡಿದ ನಿಯಮಗಳು

ಕಾರ್ಮಿಕ ಸಚಿವಾಲಯ

ಅಧಿಸೂಚನೆ

**ಸಂಖ್ಯೆ : ಕಾಇ 47 ಎಲ್‌ಎಂಡಬ್ಲ್ಯೂ 2017 (ಭಾಗ-1), ಬೆಂಗಳೂರು, ದಿನಾಂಕ: 30-07-2018**

ಕನಿಷ್ಠ ವೇತನ ಕಾಯ್ದೆ, 1948 (1948ರ ಕೇಂದ್ರ ಅಧಿನಿಯಮ XI) ರ ಕಲಂ 27 ರಡಿ ರಾಜ್ಯ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಾಯ್ದೆಯ ಕಲಂ 2 (ಜಿ) ರಲ್ಲಿ ನಿರೂಪಿಸಿರುವಂತೆ, ಶಾಸನಾತ್ಮಕ ರಕ್ಷಣೆಯನ್ನು ವಿಸ್ತರಿಸುವ ಉದ್ದೇಶದಿಂದ ರಾಜ್ಯ ಸರ್ಕಾರವು ಕಾಯ್ದೆಯ ಅನುಸೂಚಿಯ ವ್ಯಾಪ್ತಿಯಿಂದ ಹೊರಗಿರುವ ಉದ್ದಿಮೆಗಳನ್ನು ಅನುಸೂಚಿಗೆ ಸೇರಿಸಲು ಉದ್ದೇಶಿಸಿ, ಕರ್ನಾಟಕ ರಾಜ್ಯ ಪತ್ರದ ಭಾಗ 4(ಎ), ಪುಟ ಸಂಖ್ಯೆ 9028 ರಲ್ಲಿ, ದಿನಾಂಕ: 05-10-2017 ರಲ್ಲಿ ಅಧಿಸೂಚನೆ ಸಂಖ್ಯೆ: ಕಾಇ 47 ಎಲ್‌ಎಂಡಬ್ಲ್ಯೂ 2017, ದಿನಾಂಕ: 01-08-2017 ಅನ್ನು ಪ್ರಕಟಿಸಿ ತನ್ಮೂಲಕ ಈ ಕರಡು ಅಧಿಸೂಚನೆಯಿಂದ ಬಾಧಿತರಾಗುವ ಹಾಗೂ ಸಂಬಂಧವಿರುವ ವ್ಯಕ್ತಿಗಳು ಹಾಗೂ ಅವರನ್ನು ಪ್ರತಿನಿಧಿಸುವ ಸಂಘ-ಸಂಸ್ಥೆಗಳ ಗಮನಕ್ಕೆ ವಿಷಯವನ್ನು ರಾಜ್ಯ ಸರ್ಕಾರವು ತಂದಿರುತ್ತದೆ. ರಾಜ್ಯ ಸರ್ಕಾರವು ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಸಲಹೆಗಳನ್ನು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಮೂರು (03) ತಿಂಗಳ ಕಾಲಾವಕಾಶವನ್ನು ಸಂಬಂಧಿಸಿದವರೆಲ್ಲರಿಗೂ ಕಲ್ಪಿಸಿರುತ್ತದೆ. ಈ ಸಂಬಂಧ ಸ್ವೀಕೃತವಾದ ಆಕ್ಷೇಪಣೆಗಳನ್ನು ರಾಜ್ಯ ಸರ್ಕಾರವು ಪರಿಶೀಲಿಸಿರುತ್ತದೆ.

ಕನಿಷ್ಠ ವೇತನ ಕಾಯ್ದೆ, 1948ರ ಕಲಂ 27 ಸಹವಾಚಿತ 2(ಜಿ) ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರಾಜ್ಯ ಸರ್ಕಾರವು ಈ ಕೆಳಕಂಡ ಕೋಷ್ಟಕದಲ್ಲಿರುವ ಉದ್ದಿಮೆಗಳನ್ನು ಕಾಯ್ದೆಯ ಅನುಸೂಚಿಗೆ ಈ ಮೂಲಕ ಸೇರ್ಪಡೆಗೊಳಿಸಿರುತ್ತದೆ.

**Table-1**

ಅನುಸೂಚಿಗೆ ಸೇರ್ಪಡಿಸಬೇಕಾದ ಉದ್ದಿಮೆಗಳ ವಿವರಗಳು:

ಅನುಸೂಚಿ

ಕಲಂ -2 (ಜಿ) ಸಹವಾಚಿತ ಕಲಂ-27

ಭಾಗ-1

| ಕ್ರಮ ಸಂಖ್ಯೆ | ಉದ್ದಿಮೆಯ ಶೀರ್ಷಿಕೆ (ಹೆಸರು) | 1948 ರ ಕನಿಷ್ಠ ವೇತನ ಕಾಯ್ದೆಯ ಅನುಸೂಚಿಯಲ್ಲಿ ಪ್ರವೇಶಿಕ ಸಂಖ್ಯೆ |
|---|---|---|
| 1 | ವಿದ್ಯುನ್ಮಾನ ವ್ಯವಹಾರ (E-Commerce) ಮತ್ತು ಕೋರಿಯರ್ (Courier) ಸೇವಾ ಸಂಸ್ಥೆಗಳಲ್ಲಿ ಉದ್ಯೋಗ. | 83 |
| 2 | ವ್ಯಾಯಾಮ ಶಾಲೆ, ಸ್ಪಾ, ಸೌಂದರ್ಯ ಚಿಕಿತ್ಸಾ ಕೇಂದ್ರ, ಮಸಾಜ್ ಕೇಂದ್ರಗಳು, ಫಿಟ್ನೆಸ್ ಕೇಂದ್ರಗಳು, ಯೋಗ ಕೇಂದ್ರಗಳು ಹಾಗೂ ಇತರೆ ಆರೋಗ್ಯ ಹಾಗೂ ಸೌಂದರ್ಯವರ್ಧಕ ಚಿಕಿತ್ಸಾ ಕೇಂದ್ರಗಳು. | 84 |

| ಕ್ರಮ ಸಂಖ್ಯೆ | ಉದ್ದಿಮೆಯ ಶೀರ್ಷಿಕೆ (ಹೆಸರು) | 1948 ರ ಕನಿಷ್ಠ ವೇತನ ಕಾಯ್ದೆಯ ಅನುಸೂಚಿಯಲ್ಲಿ ಪ್ರವೇಶಿಕ ಸಂಖ್ಯೆ |
|---|---|---|
| 3 | ಧಾರ್ಮಿಕ ಹಾಗೂ ಸಾಮಾಜಿಕ ಸಂಸ್ಥೆಗಳು–ಮಂದಿರಗಳು, ಮಠಗಳು, ಚರ್ಚ್‌ಗಳು, ಮಸೀದಿಗಳು, ಗುರುದ್ವಾರಗಳು, ಬಸದಿಗಳು, ಗುಡಿಗಳು, ವಿಹಾರಗಳು ಹಾಗೂ ಇಸ್ಕಾನ್, ಆರ್ಯ ಸಮಾಜ, ಥಿಯೋಸೊಫಿಕಲ್ ಸೊಸೈಟಿ ಇತ್ಯಾದಿಗಳ ಸಹಿತ ಈ ಮೇಲ್ಕಂಡ ಎಲ್ಲಾ ಸಂಸ್ಥೆಗಳ ಕಛೇರಿಗಳಲ್ಲಿ ಉದ್ಯೋಗ. | 85 |
| 4 | ಸಾರ್ವಜನಿಕ ವಿನೋದ ಕ್ರೀಡಾ ಸ್ಥಳ (Public Amusement Parks), ಜಲ ಆಧಾರಿತ ವಿನೋದ ಕ್ರೀಡಾ ಸ್ಥಳಗಳು (Water Theme Parks) ಹಾಗೂ ಇತರೆ ವಾಣಿಜ್ಯ ಮನೋರಂಜನಾ/ವಿಹಾರ ಸ್ಥಳಗಳಲ್ಲಿ ಉದ್ಯೋಗ. | 86 |
| 5 | ಮೊಬೈಲ್ ಗೋಪುರಗಳ ನಿರ್ವಹಣೆ, ಟಿ.ವಿ. ಕೇಬಲ್ ಜಾಲ ಹಾಗೂ ತತ್ಸಮಾನ ಪ್ರಕ್ರಿಯೆಗಳಲ್ಲಿ ಉದ್ಯೋಗ. | 87 |
| 6 | ಒಳನಾಡು ಜಲ ಸಾರಿಗೆ ಅಂದರೆ ವಾಣಿಜ್ಯ ಮೋಟಾರು ದೋಣಿಗಳು, ಲಾಂಚ್‌ಗಳು, ಸಾಂಪ್ರದಾಯಿಕ ದೋಣಿಗಳು ಹಾಗೂ ಮೀನುಗಾರಿಕಾ ದೋಣಿಗಳಲ್ಲಿ ಉದ್ಯೋಗ. | 88 |
| 7 | ವೃದ್ಧಾಶ್ರಮಗಳು, ಅನಾಥಾಶ್ರಮಗಳು, ನಿರ್ಗತಿಕ ಮಕ್ಕಳ ಮತ್ತು ಮಹಿಳಾ ಪಾಲನಾ ಕೇಂದ್ರಗಳು, ಚಿಕ್ಕ ಮಕ್ಕಳ ಪಾಲನಾ, ಶಿಕ್ಷಣ ಹಾಗೂ ಇತರೆ ಸಂಸ್ಥೆಗಳಲ್ಲಿ ಉದ್ಯೋಗ. | 89 |
| 8 | ಸರ್ಕಾರೇತರ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ನೋಂದಾಯಿತ ಸೊಸೈಟಿಗಳು, ಟ್ರಸ್ಟ್‌ಗಳು, ಫೌಂಡೇಷನ್‌ಗಳು ಹಾಗೂ ಅವುಗಳಿಗೆ ಹೊಂದಿಕೊಂಡಿರುವ ಕಛೇರಿಗಳಲ್ಲಿ / ಕ್ಷೇತ್ರಗಳಲ್ಲಿ ಉದ್ಯೋಗ. | 90 |
| 9 | ಅಲ್ಯೂಮಿನಿಯಂ ಮತ್ತು ಟಿನ್ ಉತ್ಪನ್ನಗಳಲ್ಲಿ ಉದ್ಯೋಗ. | 91 |
| 10 | ಬೆತ್ತ ಮತ್ತು ಬಿದಿರು ಉದ್ದಿಮೆಗಳಲ್ಲಿ ಉದ್ಯೋಗ. | 92 |
| 11 | ತೆಂಗಿನಕಾಯಿ ಮತ್ತು ನಾರು ಉತ್ಪನ್ನಗಳ ಉದ್ದಿಮೆಗಳಲ್ಲಿ ಉದ್ಯೋಗ. | 93 |
| 12 | ಗಣಕಯಂತ್ರ (ಕಂಪ್ಯೂಟರ್) ಮತ್ತು ಸೈಬರ್/ಅಂತರ್ಜಾಲ ಕೇಂದ್ರಗಳಲ್ಲಿ ಉದ್ಯೋಗ. | 94 |
| 13 | ಕರಕುಶಲ ಸಂಸ್ಥೆಗಳಲ್ಲಿ ಉದ್ಯೋಗ. | 95 |
| 14 | ಖಾದಿ ಮತ್ತು ಗ್ರಾಮೀಣ ಉದ್ದಿಮೆಗಳಲ್ಲಿ ಉದ್ಯೋಗ. | 96 |
| 15 | ಎಲ್.ಪಿ.ಜಿ. ಸಂಗ್ರಹ ಮತ್ತು ವಿತರಣಾ ಉದ್ದಿಮೆಯಲ್ಲಿ ಉದ್ಯೋಗ. | 97 |
| 16 | ನದಿ/ಹೊಳೆಯಿಂದ ಮರಳು/ಹೋಯ್ಗೆ ಶೇಖರಣಾ ಪ್ರಕ್ರಿಯೆಯಲ್ಲಿ ಉದ್ಯೋಗ. | 98 |
| 17 | ಕೊಳವೆ ಬಾವಿ ಕೊರೆಯುವ ಮತ್ತು ನಿರ್ವಹಣೆ ಮಾಡುವ ಪ್ರಕ್ರಿಯೆಗಳಲ್ಲಿ ಉದ್ಯೋಗ. | 99 |
| 18 | ಗುಜರಿ / ಹಳೆ ಸಾಮಗ್ರಿಗಳ ಶೇಖರಣೆ ಹಾಗೂ ವಿಂಗಡನಾ ಪ್ರಕ್ರಿಯೆಗಳಲ್ಲಿ ಉದ್ಯೋಗ. | 100 |
| 19 | ಅಡಿಗೆ ಉಪ್ಪು ತಯಾರಿಕಾ ಪ್ರಕ್ರಿಯೆ / ಉದ್ದಿಮೆಗಳಲ್ಲಿ ಉದ್ಯೋಗ. | 101 |
| 20 | ಶಾಮಿಯಾನ, ಚಪ್ಪರ ಮತ್ತು ಪೆಂಡಾಲ್‌ಗಳನ್ನು ನಿರ್ಮಿಸಿ, ತೆಗೆಯುವ ಪ್ರಕ್ರಿಯೆ ಹಾಗೂ ಹೂವಿನ ಅಲಂಕಾರ, ಪೀಠೋಪಕರಣಗಳ ಜೋಡಣೆ ಇತ್ಯಾದಿ ಕೆಲಸಗಳಲ್ಲಿ ಉದ್ಯೋಗ. | 102 |
| 21 | ಎಂ–ಸ್ಯಾಂಡ್ ಸಂಸ್ಥೆಗಳಲ್ಲಿ ಉದ್ಯೋಗ. | 103 |

**ಅನುಸೂಚಿ**

**ಕಲಂ –2 (ಜಿ) ಸಹವಾಚಿತ ಕಲಂ–27**

**ಭಾಗ–II**

| ಕ್ರಮ ಸಂಖ್ಯೆ | ಅನುಸೂಚಿಯಲ್ಲಿ ಸೇರಿಸಬೇಕಾದ ಉದ್ದಿಮೆಯ ಶೀರ್ಷಿಕೆ (ಹೆಸರು) | 1948 ರ ಕನಿಷ್ಠ ವೇತನ ಕಾಯ್ದೆಯ ಅನುಸೂಚಿಯಲ್ಲಿ ಪ್ರವೇಶಿಕ ಸಂಖ್ಯೆ |
|---|---|---|
| 1 | ಕೋಳಿ / ಹಕ್ಕಿಗಳ ಸಾಕಾಣಿಕೆ ಮತ್ತು ಪಶು ಪಾಲನಾ ಪ್ರಕ್ರಿಯೆಗಳಲ್ಲಿ ಉದ್ಯೋಗ. | 04 |

**PR.741**

**SC.200**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎ.ಎಸ್. ರಾಧಾಮಣಿ**

ಸರ್ಕಾರದ ಅಧೀನ ಕಾರ್ಯದರ್ಶಿ,

ಕಾರ್ಮಿಕ ಇಲಾಖೆ.